# ಲೇಖನ ವೈವಿಧ್ಯ –  ಅಧ್ಯಾಯ ೦೧

## ಹೊಸ ಸಹಸ್ರಮಾನದಲ್ಲಿ ಸೃಜನಶೀಲ ಸಾಹಿತ್ಯ

– ಶ್ರೀ ವ್ಯಾಸರಾಯ ಬಲ್ಲಾಳ

ನಮ್ಮ ಇಂದಿನ ಸೃಜನಶೀಲ ಸಾಹಿತ್ಯಕ್ಕೆ ಸಂಬಂಧಿಸಿದ ಪರಿಕಲ್ಪನೆಗಳು ಪಾಶ್ಚಾತ್ಯ ವೈಚಾರಿಕತೆಯ ಮಾನದಂಡಗಳನ್ನು ಇಂಗ್ಲೀಷ್ ಭಾಷೆಯ ಸಾಹಿತ್ಯದ ಕುರಿತಾದ ಪರಿಕಲ್ಪನೆಗಳನ್ನು ಬಹುಮಟ್ಟಿಗೆ ಆಶ್ರಯಿಸಿಕೊಂಡಿವೆ ಸಾಹಿತ್ಯದ ಜಾಗತೀಕರಣಕ್ಕೆ ಕಾರಣವಾಗಿರುವುದು ಇಂಗ್ಲೀಷ್ ಆದಕಾರಣ ಇದರಲ್ಲಿ ಆಶ್ಚರ್ಯವಿಲ್ಲ ಸಹಸ್ರಮಾನದ ಉತ್ತರಾರ್ಧದ ಅದು ಕೊನೆಕೊನೆಯ ಶತಮಾನಗಳ ವೈಚಾರಿಕತೆಯ ಬೇರೆ ಬೇರೆ ಮುಖಗಳು ಪಾಶ್ಚಾತ್ಯ ವಿಚಾರ ಸರಣಿ ಅನುಗುಣವಾಗಿಯೇ ಬಂದಿರುವುದರಿಂದ ಹೊಸ ಸಹಸ್ರಮಾನದಲ್ಲಿ ಸೃಜನಶೀಲ ಸಾಹಿತ್ಯವನ್ನು ಕುರಿತು ಯೋಚಿಸುವಾಗ ಈಗ ಕೊನೆ ಗೊಳ್ಳುತ್ತಿರುವ  ಸಹಸ್ರಮಾನದ ಸಾಹಿತ್ಯಕ ಸಾಧನೆಯ ಸ್ಪಷ್ಟ ಚಿತ್ರವನ್ನು ಒಂದು ಕೊಳ್ಳಬೇಕಾಗುತ್ತದೆ ಹಾಗೆ ನೋಡಿದರೆ ಭೂತ ವರ್ತಮಾನ ಭವಿಷ್ಯತ್ತಗಳನ್ನು ಬೆಸೆಯುವ ಸಾಹಿತ್ಯಕ ಕೊಂಡಿಗಳು ನಮ್ಮ ಸಾಹಿತ್ಯದ ಇತಿಹಾಸದಲ್ಲಿ ಹೇಗೆ ಕಾಣಿಸಿಕೊಂಡಿವೆ ಎಂದು ನೋಡುವ ಕುತೂಹಲ ಉಂಟಾಗುತ್ತದೆ

ಇತ್ತೀಚೆಗೆ ಇಂಗ್ಲೀಷಿನ ಸಹಸ್ರಮಾನದ ಸಾಹಿತಿ ಯಾರೆಂದರೆ ಶೇಕ್ಸ್‌ಪಿಯರ್ ಎಂಬ ಉತ್ತರ ಬರುತ್ತದೆ ಯುರೋಪಿನಲ್ಲಿ ಸಾಹಿತ್ಯ ಸಂವಹನದ ಧಾರಣಶಕ್ತಿಯನ್ನು ತೋರಿಸಲು ಕೃತಿಯ ಅಮರತ್ವವನ್ನು ಸಂಕೇತಿಸಲು ಗ್ರೀಕ್ ಕವಿ ಹೋಮರನ ಉದಾಹರಣೆಯನ್ನು ಕೊಡುತ್ತಾರೆ ಯಾವುದೇ ಒಂದು ಕೃತಿ ಮೂರು ಸಾವಿರ ವರ್ಷಗಳ ಕಾಲ ಜನಮಾನಸದಲ್ಲಿ ಅಮರತ್ವವನ್ನು ಹೊಂದಿದ್ದರೆ ಅದು ಸಹಸ್ರಮಾನದ ಸಾಹಿತ್ಯ ಹೋಮರ್ ಕವಿಯ ಈಲಿಯಡ್ ಮಹಾಕಾವ್ಯ ಕ್ರಿಸ್ತಪೂರ್ವ ಏಳುನೂರ ಅದಕ್ಕಿಂತ ಹಿಂದಿನದು  ಎಂದು ರಿಯಲ್ ಆಗಿದ್ದರು ೫೦೦ ವರ್ಷಗಳ ಹಿಂದಿದ್ದ ಶೇಕ್ಸ್ಪಿಯರ್ನ ವರ್ಚಸ್ಸು ಇಂಗ್ಲಿಷ್ ಸಾಹಿತ್ಯದ ಮೇಲೆ ಬಿದ್ದಿರುವುದರಿಂದ ಯುರೋಪಿನ ಜನ ಕಾಲಾತೀತ ಬಹುದಾದ ಸತ್ಯಗಳ ತಿಳುವಳಿಕೆ ನೀಡುವ ಕೃತಿಗಳೆಂದು ನೆನಪಿಸಿಕೊಳ್ಳದೆ ಈ ರೀತಿಯಾಗಿ ಯೋಚನೆಯನ್ನೂ ಮಾಡದೆ ಹೊಸ ಸಹಸ್ರಮಾನದ ಭಾರತೀಯ ಭಾಷೆಗಳ ಸೃಜನಶೀಲ ಸಾಹಿತ್ಯದ ಕುರಿತು ಮಾತನಾಡುವುದು ಸರಿ ಎನಿಸುವುದಿಲ್ಲ

ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತ ಭಾರತದ ಮಟ್ಟಿಗೆ ಶತಮಾನದ ಸೃಜನಶೀಲ ಗ್ರಂಥಗಳು ರಾಮಾಯಣದ ಕಥಾಹಂದರ ಕ್ರೌಂಚ ಪಕ್ಷಿಗಳಿಗೆ ಒದಗಿದ ಸಾವಿನ ಅಗಲಿಕೆಯ ನೋವು ಮಹಾಭಾರತಕ್ಕೆ ದಾಯಾದಿಗಳ ಮತ್ಸರ ದ್ವೇಷ ಕ್ರೌರ್ಯ ವಾಗಿ ಹಿಂಸೆಯಾಗಿ ಯುದ್ಧವು ಸಾವು–ನೋವುಗಳಿಗೆ ಕಾರಣವಾದ ನೋವು ರಾಮಾಯಣ ಮಹಾಕಾವ್ಯದ ಪ್ರಸ್ತುತತೆ ೧೯ನೇ ಶತಮಾನ ಕೊನೆಗೊಂಡ ಸಂದರ್ಭದಲ್ಲಿ ಹೆಚ್ಚು ಹೆಚ್ಚು ಪ್ರಸಿದ್ಧಿಗೆ ಬರತೊಡಗಿದ ಸ್ತ್ರೀಸಂವೇದನೆಯ ಚಳುವಳಿಯ ಹಿನ್ನೆಲೆ ಕಾಣಬಹುದಾದರೂ ಮಹಾಭಾರತದ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ವರ್ಚಸ್ಸು ಕಾಲದೇಶಗಳ ಸೀಮಾ ರೇಖೆಯನ್ನು ದಾಟಿ ಭಾರತದ ಎಲ್ಲ ಭಾಗಗಳ ಜನಪದ ಸಂಸ್ಕಾರಗಳನ್ನು ಪರಿಭಾವಿಸಿದ ಹಿರಿಮೆ ಮಹಾಭಾರತಕ್ಕೆ ಅಮೇರಿಕಾ ದೇಶದ ಅಮೇರಿಕಾ ಬ್ರಾಡ್ವೇ ರಂಗಭೂಮಿಯಲ್ಲಿ ಮಹಾಭಾರತದ ನಾಟಕ ರೂಪ ಪ್ರದರ್ಶನಗೊಂಡಿದ್ದು ಈ ಕೃತಿಯ ಸಾಹಿತ್ಯ  ಸತ್ವವಿರುವ ಒಂದು ಜ್ವಲಂತ ಉದಾಹರಣೆ ಕ್ರಿಸ್ತಪೂರ್ವದಲ್ಲಿ ರಚನೆಯಾದ ಮಹಾಭಾರತ ಅದರ ಪ್ರಸ್ತುತತೆ ಇಂದಿಗೂ ಮಾಸಿಲ್ಲ ವಾದರೂ ಹೊಸ ಸಹಸ್ರಮಾನದಲ್ಲಿ ಅಂತಹ ಮೇರು ಕೃತಿ

ಹೊರಬರುವಂತಹ ಪರಿಸರ ಬರಬಹುದೆ ಸಾಮಾಜಿಕ ಸಂದರ್ಭ ನಿರ್ಮಾಣವಾಗಬಹುದು ಎಂಬ ಸಹಜ ಕುತೂಹಲ ಕಾಡುತ್ತದೆ

ಇಂದು ಸಾಹಿತ್ಯದ ಸೃಜನಶೀಲತೆ ಒಂದು ಭಾಷೆಯ ಒಂದು ಪ್ರದೇಶದ ಅಥವಾ ಒಂದು ದೇಶದ ಪರಿಧಿಯಲ್ಲೇ ಇರಬಹುದಾದರೂ ಅದು ಇಂಗ್ಲಿಷ್ ಭಾಷೆಯ ಪ್ರಭಾವದ ಜಾಗತೀಕರಣದ ವರ್ಚಸ್ಸಿನಿಂದ ಹೊರಗೆ ಉಳಿಯಲು ಸಾಧ್ಯವಿಲ್ಲ ರಾಮಾಯಣ ಮಹಾಭಾರತಗಳು ಶತಶತಮಾನಗಳ ಕಾಲ ಭಾರತದ ಎಲ್ಲ ಭಾಷೆಗಳ ಮೇಲೆ ಸೃಜನಶೀಲ  ಪ್ರಕ್ರಿಯೆಗಳ ಮೇಲೆ ವರ್ಚಸ್ಸನ್ನು ಪ್ರಭಾವವನ್ನು ಬೀರಿದರೂ ಪಾಶ್ಚಾತ್ಯ ಸಾಹಿತ್ಯ ಚಿಂತನೆಯಿಂದ ಹೊರಬರಲಾಗದ ನಮ್ಮ ಪ್ರಜ್ಞೆ ಆಧುನಿಕತೆ ವಿಶ್ವವ್ಯಾಪಿ ಸಮುದಾಯವನ್ನು ಅತ್ಯಂತ ವೇಗವಾಗಿ ಪರಿವರ್ತನೆ ಮಾಡುತ್ತಿರುವ ರೀತಿ ವಿಜ್ಞಾನ–ತಂತ್ರಜ್ಞಾನದ ಬದಲಾವಣೆಗಳು ನಾಶವಾಗುತ್ತಿರುವ ನಮ್ಮ ಪರಂಪರಾಗತ  ನಂಬಿಕೆಗಳು ಇವುಗಳೆಲ್ಲ ಮುಂದಿನ ಸಹಸ್ರಮಾನದ ಸಾಹಿತ್ಯ ರಚನೆಯ ಸೃಜನಶೀಲತೆಗೆ ಸ್ಪಂದಿಸದೇ ಇರಲಾಗುವುದಿಲ್ಲ ನಮ್ಮ ರಾಮಾಯಣ–ಮಹಾಭಾರತ ಗಳಂತೆ ಅದರ ನಂತರದ ಕಥೆ ಪರಂಪರೆ ಪಂಚತಂತ್ರ ಕಥೆ ಗಳಿಂದ ಕಥಾಸರಿತ್ಸಾಗರ ಬೇತಾಳ ಪಂಚವಿಂಶತಿ ಕಥೆಗಳಿಂದ ಹಾಗೆಯೇ ಮೌಖಿಕ ಮತ್ತು ಲಿಖಿತ ಜಾನಪದ ಸಾಹಿತ್ಯ ಪರಂಪರೆಗಳಿಂದ ಪ್ರಭಾವಿತವಾಗಿ ರಚನೆಯಾಗಿದೆ ಇಲ್ಲಿ ಅಭಿಮಾನದ ಮಾತೆಂದರೆ ಭಾರತೀಯ ಪರಿಸರದಲ್ಲಿ ಸಾಹಿತ್ಯ ಪರಂಪರೆಯನ್ನು ಸಾರಾಸಗಟಾಗಿ ನಾವು ತಿರಸ್ಕರಿಸಿಲ್ಲ ನಮ್ಮ ಸಾಹಿತ್ಯದ ಇತಿಹಾಸವನ್ನು ಆಧುನಿಕ ಮೌಲ್ಯ ಪ್ರಜ್ಞೆಯ ಒರೆಗಲ್ಲಿಗೆ ಹಚ್ಚಿ ನೋಡಿ ವಸ್ತು ವಿಚಾರಗಳನ್ನು ವರ್ತಮಾನದ ಸಾಮಾಜಿಕ ಬದುಕಿಗೆ ಅನ್ವಯಿಸಿ ನೋಡಬಯಸುವ ವಿಧಾನವನ್ನು ನಾವು ಎಂದಿಗೂ ಕೈ ಬಿಟ್ಟಿಲ್ಲ

ಡಾರ್ವಿನ್ನನ ವಿಕಾಸವಾದ ಮಾರ್ಕ್ಸ್ನ ಸಮತಾವಾದ ಸಿಗ್ಮಂಡ್ ಫ್ರಾಯ್ಡ್ನ ಮನೋವಿಶ್ಲೇಷಣೆಯ ಸಿದ್ಧಾಂತಗಳು ಕರ್ಕಿ ಗಾರ್ಡ್‌ನ ಅಸ್ತಿತ್ವವಾದಿ ಚಿಂತನೆ ಇವುಗಳಲ್ಲಿ ಅದರಿಂದ ಪ್ರಭಾವಿತವಾದ ವೈಚಾರಿಕ ಚಿಂತನೆಯಲ್ಲಿ ಈ ಸಹಸ್ರಮಾನದ ಸಾಹಿತ್ಯಕ ಚಿಂತನೆಯ ಪ್ರಗತಿಯನ್ನು ಗುರುತಿಸುತ್ತೇವೆ ಇಂದು ಸೃಜನಶೀಲ ಸಾಹಿತ್ಯ ವಿರಾಮಕಾಲದ ಓದುಗರ ಮನರಂಜನೆಯ ಸಾಧನವಾಗಿ ಉಳಿದಿಲ್ಲ ಅವರ ಬದುಕಿಗೆ ಬದುಕುತ್ತಲೇ ಬೇಕಾದ ಎಲ್ಲಾ ಸಂದರ್ಭಗಳಿಗೆ ಭಾಷ್ಯ  ಬರೆಯುವ ಸಾಧನವಾಗಿ ಮುಂದುವರೆದಿದೆ ಮಾನವೀಯ ಅನಿಸುವ ಸಂವೇದನೆ ಗಳಿಂದ ರೂಪಗೊಳ್ಳುವ ಸೌಂದರ್ಯಪ್ರಜ್ಞೆ ಎಚ್ಚರ ತಂದುಕೊಂಡೆ ಸೃಜನಶೀಲ ಕ್ರಿಯೆ ತನ್ನ ತನ್ನ ಅರ್ಥವಂತಿಕೆಯನ್ನು ಕಂಡುಕೊಳ್ಳುತ್ತದೆ

ಈಗ ಮುಗಿಯುತ್ತಿರುವ ಸಹಸ್ರಮಾನದ ಇಪ್ಪತ್ತನೆಯ ಶತಮಾನ ವಿಶ್ವದ ಎಲ್ಲಾ ಭಾಗಗಳ ಮಾನವ ಸಮಾಜಗಳನ್ನು ಮುಟ್ಟಿದೆ ವಿಜ್ಞಾನದ ಅದ್ಭುತವೆನಿಸುವ ಬೆಳವಣಿಗೆಗಳನ್ನು ಕಂಡಿದೆ ನ್ಯೂಟನ್ ನಂತರ ವಿಜ್ಞಾನ ಪ್ರಪಂಚಕ್ಕೆ ಅದ್ಭುತ ಕೊಡುಗೆಗಳನ್ನು ಕೊಟ್ಟ ಐನ್ಸ್ಟೈನ್ ರವರ ಶತಮಾನ ಅಣು ಬಾಂಬುಗಳ ಶತಮಾನ ಮನುಷ್ಯನ ಅಂತರಂಗದ ಕಣಗಳನ್ನು ಶೋಧಿಸಲು ಪ್ರಯತ್ನಿಸಿದ ಶತಮಾನ ಜೀವವಾಹಿ ಡಿಎನ್‌ಎ ಶತಮಾನ ಕುರಿ ಮಂಗಗಳ ಅದ್ಭುತವೆನಿಸುವ ಪ್ರತಿಸೃಷ್ಟಿ ಯ ಶತಮಾನ ಪ್ಲಾಸ್ಟಿಕ್ ರಾಡರ್ ಸಿಲಿಕಾನ್ ಇವುಗಳ ಶೋಧನೆಯ ಶತಮಾನ ತರ್ಕ ಭಾಷೆ ಅಧ್ಯಯನ ಗಣಿತ ಅರ್ಥಶಾಸ್ತ್ರ ಬಾಹ್ಯಾಕಾಶ ಮೊದಲಾದವುಗಳ ಕುರಿತು ತಿಳುವಳಿಕೆಯನ್ನು ಬುಡಮೇಲು ಮಾಡಿದ ಶತಮಾನ ಮಾನವನ ಪ್ರಗತಿಗೆ ಹಾಗೂ ವಿನಾಶಕ್ಕೆ ಸಹಕರಿಸಬಹು ದಾದ ವೈಜ್ಞಾನಿಕ ಬೌದ್ಧಿಕ ಶೋಧನೆ ಇವುಗಳ ಹಿಂದೆ ಸೃಜನಶೀಲ ಆಸಕ್ತಿ ಕೆಲಸ ಮಾಡಿದ್ದು ವಿಶಿಷ್ಟ ಮಾನವ ಪ್ರತಿಭೆಯ ಮನಸ್ಸು ಇಂದಿನ ಸಾಹಿತ್ಯ ಇವುಗಳಿಂದ ಪ್ರಭಾವಿತಗೊಂಡಿದೆ ಹೊಸ ಸಹಸ್ರಮಾನದ ಆರಂಭದ ಶತಮಾನಗಳಲ್ಲಿ ಇಂತಹ ವೈಜ್ಞಾನಿಕ ಹಾಗೂ ತಾಂತ್ರಿಕ ಜ್ಞಾನ ಬದುಕನ್ನು ಮುಟ್ಟುವ ಸತ್ಯಗಳನ್ನು ಅನ್ವೇಷಿಸುತ್ತಾ ಮುಂದುವರೆಯುತ್ತದೆ ಸಾಮಾಜಿಕ ಪ್ರಜ್ಞೆಯಾಗಲಿ ಸಾಮಾಜಿಕ ಬದುಕು ನಂಬಿ ಕೊಳ್ಳಬಹುದಾದ ನೈತಿಕತೆಯ

ಪರಿಕಲ್ಪನೆಗಳ ಆಗಲೇ ಹಾಗೆಯೇ ಮುಂದುವರೆಯುತ್ತವೆ ಎಂದು ಹೇಳುವುದು ಅಸಾಧ್ಯ ಇಂದಿನ ಗ್ರಾಹಕ ಸಂಸ್ಕೃತಿ ಸುಖದ ಪರಿಕಲ್ಪನೆಗಳಿಗೆ ಹೊಂದಿಕೊಂಡು ಮುಂದುವರೆಯುತ್ತಿರುವ ಗ್ರಾಹಕ ಸಂಸ್ಥೆ ಮುಂದೆ ಹೋದಂತೆ ಅನೇಕ ನೋವಿಗೆ ಕಾರಣವಾಗಬಹುದು ಎಂಬುದನ್ನು ಹೇಳಲು ತ್ರಿಕಾಲಜ್ಞಾನ ಅವಶ್ಯಕತೆ ಇಲ್ಲ

ಬಂಗಾಳದ ಶರತ್ ಚಂದ್ರ ಚಟರ್ಜಿ ಅವರನ್ನು ಇದು ಪ್ರವರ್ತಕ ಲೇಖಕ ಎಂದು ಗೌರವಿಸಿದೆ ಇತ್ತೀಚೆಗೆ ಶತಮಾನದ ಅತ್ಯಂತ ಮಹತ್ವ ಲೇಖಕನೆಂದು ಒಂದು ಸಮೀಕ್ಷೆ ತಿಳಿಸಿದೆ ತಮ್ಮ ತಮ್ಮ ಭಾಷಾ ವಲಯಗಳಲ್ಲಿ ಶತಮಾನದ ಮಹತ್ವದ ಲೇಖಕರೇನಿಸಿಕೊಂಡವರ ಆಯ್ಕೆಯೂ ನಡೆಯುತ್ತದೆ ಆದರೆ ಶರತ್ಚಂದ್ರ ಆಯ್ಕೆಗೆ ಭಾರತದಾದ್ಯಂತ ಅವರ ಕೃತಿಗಳನ್ನು ಓದಿದವರು ಒಪ್ಪಬಹುದಾದ ಅಂತಹ ಬೇರೆ ಬೇರೆ ಭಾಷಾ ವಲಯಗಳ ಲೇಖಕರಿಗೆ ಇತರ ಭಾಷಾ ವಲಯದವರು ಸ್ಪಂದಿಸುವುದು ಸಂದೇಹದ ಮಾತು ಸಹಸ್ರಮಾನದ ಸೃಜನಶೀಲತೆ ಕುರಿತು ಮಾತನಾಡುವಾಗ ಶರತ್ಚಂದ್ರ ಅವರ ವಿಚಾರ ಅಪ್ರಸ್ತುತ ಆಗುವುದು ಅವರು ತನ್ನ ಕೃತಿಗಳ ಯೋಗ್ಯತೆಯಿಂದ ಅನುವಾದ ಪರಂಪರೆ ವಿಶೇಷವಾಗಿದ್ದ ಕಾಲದಲ್ಲಿ ರಾಷ್ಟ್ರಾದ್ಯಂತ ತನ್ನ ಕೃತಿಗಳ ಓದುವ ಜನವರ್ಗವನ್ನು ಸಂಪಾದಿಸಲು ಶಕ್ತರಾದ ರೆಂದು ಅಂತಹ ವಿಶಿಷ್ಟ ಜನಪ್ರಿಯ ಲೇಖಕರನ್ನು ಕಳೆದ ಶತಮಾನಗಳಲ್ಲಿ ಬೆರಳೆಣಿಕೆಯ ಮಂದಿ ಅಷ್ಟೇ ಎಂದು ಗುರುತಿಸಬಹುದು ಬಂಕಿಮಚಂದ್ರ ಚಟರ್ಜಿ ಹಾಗೂ ರವೀಂದ್ರನಾಥ ಟಾಗೋರ್ ಅವರ ಮಟ್ಟಕ್ಕೆ ಬಾರದ ಭಾವುಕ ಲೇಖಕ ಎಂದು ಶರತ್ಚಂದ್ರ ಟೀಕೆಗೆ ಒಳಗಾಗಿದ್ದು ಇದೆ ಆದರೆ ಶರತ್ಚಂದ್ರ ಗಳಿಸಿದ ಜನಪ್ರಿಯತೆ ಅಭಿಮಾನಕ್ಕೆ ಕಾರಣಗಳೇನು ಭಾರತೀಯ ಪರಿಸರದಲ್ಲಿ ಭಾರತೀಯ ಸಂಸ್ಕೃತಿಯ ನೆಲೆಯಲ್ಲಿ ಅವರ ಸಾಹಿತ್ಯ ಸ್ತ್ರೀ ಶೋಷಣೆಯ ಕುರಿತಾದ ಹಲವು ಸ್ತ್ರೀಪರ ದೃಷ್ಟಿಕೋನ ಈ ಶತಮಾನದ ಸೃಜನಶೀಲ ತುಡಿತಕ್ಕೆ ಕಾರಣವಾದ ಸಾಮಾಜಿಕ ಪರಿಸ್ಥಿತಿಯನ್ನು ಶೋಷಣೆ ಅನ್ಯಾಯಗಳಿಗೆ ಒಳಗಾದ ಸ್ತ್ರೀಯರು ಅನುಭವಿಸುತ್ತಿದ್ದ ಮೂಕ ವೇದನೆಯನ್ನು ಸ್ಪಷ್ಟವಾಗಿ ಅಭಿವ್ಯಕ್ತಿಸಿದೆ ಅವರು ಚಿತ್ರಿಸಿದ ಸ್ತ್ರೀ ಪಾತ್ರಗಳಲ್ಲಿ ಕಾಲದ ಕತೆಯನ್ನು ನೆನಪಿನ ಮಿತಿಯನ್ನು ದಾಟಿ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತಿರುವುದರಿಂದ ಚರಿತ್ರಹೀನ ಆದ ಸಾವಿತ್ರಿ ಕಿರಣ್ಮಯಿ ಶ್ರೀಕಾಂತ ರಾಜಲಕ್ಷ್ಮಿ ಮುಂತಾದವರು ಸ್ತ್ರೀಸಂವೇದನೆಯ ಸಾರ್ವಕಾಲಿಕ ಆಯಾಮಗಳನ್ನು ಸಾರುವ ಪಾತ್ರಗಳಾಗಿ ನಡುವೆ ನಿಂತಿವೆ

ನಮ್ಮ ಸಾಮಾಜಿಕ ಪರಿಸರದಲ್ಲಿ ಸ್ತ್ರೀ ಅನುಭವಿಸುತ್ತಲೇ ಇರುವ ನೋವು ಮುಂದಿನ ಸಹಸ್ರಮಾನದಲ್ಲಿ ಶತಮಾನಗಳ ಕಾಲ ಮುಂದುವರಿಯುವ ಲಕ್ಷಣಗಳು ಕಂಡುಬರುತ್ತಿರುವುದರಿಂದ ಸ್ತ್ರೀಶೋಷಣೆಯ ನೋವಿನಲ್ಲಿ ಸಾಹಿತ್ಯ ಭೂತ ವರ್ತಮಾನಗಳನ್ನು ಬೆಸೆಯುವ ಕೊಂಡಿ ಎಂಬ ಮಾತಿಗೆ ಸ್ಪಷ್ಟೀಕರಣ ಕನ್ನಡದ ಸಂದರ್ಭದಲ್ಲಿ ಸ್ತ್ರೀ ಸಂವೇದನೆ ವೈಚಾರಿಕ ನೆಲೆಯಲ್ಲಿ ಸಾಹಿತ್ಯಕವಾಗಿ ಮಹತ್ವದ ವಿವೇಚನೆ ಗಳಿಗೆ ಒಳಗಾಗುತ್ತಿರುವ ಅಂಶ ಎಂಬ ತಿಳುವಳಿಕೆ ಹಾಡುತ್ತಿರುವಾಗ ತುಂಬಾ ಕುತೂಹಲಕರವಾದ ಸಹಸ್ರಮಾನ ಗಳಿಗೆ ಅನ್ವಯಿಸುವ ಸಾಹಿತ್ಯದ ಸತ್ಯಗಳು ಬೆಳಕಿಗೆ ಬಂದಿವೆ ನಮ್ಮ ಮಹಾಕಾವ್ಯಗಳಾದ ರಾಮಾಯಣ ಮಹಾಭಾರತಗಳ ಪ್ರಮುಖ ಸ್ತ್ರೀಪಾತ್ರಗಳನ್ನು ಸ್ತ್ರೀ ಸಂವೇದನೆಯ ದೃಷ್ಟಿಯಿಂದ ಪರಿಶೀಲಿಸುವ ಸಾಹಿತ್ಯ ಕಥೆಗಳು ಕೂಡ ಪ್ರಕಟವಾಗಿವೆ ಅಹಲ್ಯಾ ದೇವಿ ಕುಂತಿ ದ್ರೌಪದಿ ಮುಂತಾದ ಪಾತ್ರಗಳನ್ನು ಆಧುನಿಕ ಸಂದರ್ಭದ ಅರ್ಥ ಸಂವೇದನೆಯ ತಿಳುವಳಿಕೆಯ ಹಿನ್ನೆಲೆಯಲ್ಲಿ ಪುನಃ ಮೌಲ್ಯಮಾಪನ ಮಾಡಿದ ಕೃತಿಗಳು ಬಂದಿವೆ ಸ್ತ್ರೀ ಸಾಮಾನ್ಯವಾಗಿ ಪುರುಷನಿಗಿಂತ ದುರ್ಬಲಳು ನಿನಗಾಗಿಯೇ ಇರಬೇಕಾದವರು ಎಂದು ಐತಿಹಾಸಿಕವಾಗಿ ಪರಿಗಣಿಸಲ್ಪಟ್ಟಿರುವ ಸ್ತ್ರೀ ಸಹಸ್ರಮಾನಗಳ ಕಾಲ ಗಣನೆಯಲ್ಲಿ ಆಕೆ ಅನುಭವಿಸುತ್ತಲೇ ಬಂದಿರುವ ನೋವು ಸಾರ್ವತ್ರಿಕ ಸಾರ್ವಕಾಲಿಕ ಮಹತ್ವ ಪಡೆದು ಸೃಜನಶೀಲ ತುಳಿತಕ್ಕೆ ಕಾರಣವಾಗಿದೆ

ಭಾರತದ ಸಂದರ್ಭದಲ್ಲಂತೂ ನಮ್ಮ ಪುರಾಣ ಪ್ರತಿಮೆಗಳು ಅವು ಆಧುನಿಕತೆ ಏರುತ್ತಲೇ ಇರುವ ಪರಿವರ್ತನೆಗಳಿಗೆ ಮುಖಾಮುಖಿಯಾಗುವ ರೀತಿ ನಮಗೆ ಸಹಜ ಕುತೂಹಲವನ್ನು ಇರುತ್ತದೆ ಹೊಸ ಸಹಸ್ರಮಾನದಲ್ಲಿ ನೋವೇ ಸಾಹಿತ್ಯದ ಆಕೃತಿ ಪಡೆಯುತ್ತದೆ ಎಂದು ಸಂದೇಹವಿಲ್ಲ ಇದು ವಿಶ್ವಕ್ಕೆ ಅನ್ವಯಿಸುವ ಮಾತಾದರೂ ಬಡತನ ಆರ್ಥಿಕತೆ ಅಸಮಾನತೆ ನಿಯಂತ್ರಣಕ್ಕೆ ಒಳಗಾಗದ ಜನಸಂಖ್ಯೆಯ ಹೆಚ್ಚಳ ನಿರಕ್ಷರತೆಯ ವೈಯಕ್ತಿಕ ಹಾಗೂ ಸಾಮಾಜಿಕ ನೋವು ಮತಾಂಧತೆ ನಿರಂಕುಶ ಸರ್ವಾಧಿಕಾರ ಆಡಳಿತದ ನೋವು ಎಲ್ಲವೂ ಹೆಚ್ಚಿರುವ ಜಾಗದಲ್ಲಿ ಮಹತ್ವದ ಸೃಜನಶೀಲ ಕೃತಿಗಳು ಹೊರ ಬರುವುದರಲ್ಲಿ ಆಶ್ಚರ್ಯವೇನೂ ಇಲ್ಲ

ಪ್ರಕೃತಿಯ ಚೆಲುವಿಗೆ ಸ್ಪಂದಿಸುತ್ತಲೇ ಇರಬೇಕಾದ ಮಾನವನ ಮನಸ್ಸು ಪರಿಸರ ಕುರಿತ ಕಾಳಜಿಯಲ್ಲಿ ತೃಪ್ತಿಪಟ್ಟುಕೊಳ್ಳ ಬೇಕೆ ಗಣಕಯಂತ್ರಗಳು ದೊರಕಿಸಿ ಕೊಡಬಹುದಾದ ಬಿಡುವು ಪಲಾಯನವಾದಿ ದೃಶ್ಯ ಮಾಧ್ಯಮಗಳನ್ನು ಮೆಚ್ಚಿಕೊಳ್ಳುವ ಪ್ರವೃತ್ತಿಯನ್ನು ಪ್ರೋತ್ಸಾಹಿಸಿ ಸಾಹಿತ್ಯ ಕಲೆ ಗಳಿಗೆ ಸಂಬಂಧಿಸಿದ ವಿಚಾರಗಳನ್ನು ಪರೋಕ್ಷವಾಗಿ ದೃಶ್ಯ ಮಾಧ್ಯಮಗಳ ಮೂಲಕ ಅಭಿವೃದ್ಧಿಯನ್ನು ಜೀವ ವಾಹಕ ತಂತ್ರಜ್ಞಾನ ಮನುಷ್ಯನ ಅಸ್ತಿತ್ವಕ್ಕೆ ಅರ್ಥ ಇಲ್ಲ ಎನ್ನುವ ಸಾಮಾಜಿಕ ಸಂದರ್ಭವನ್ನು ತಂದು ಬದುಕಿಗೆ ಅರ್ಥವಿಲ್ಲ ಎನ್ನುವ ಸಿನಿಕತನವನ್ನು ಬೆಳೆಸುತ್ತದೆ ಎಲ್ಲ ಪ್ರಶ್ನೆಗಳನ್ನು ಸಹಸ್ರಮಾನದಲ್ಲಿ ಇಟ್ಟು ಸೃಜನಶೀಲ ತುಡಿತವನ್ನು ಜಾಗೃತಗೊಳಿಸಬೇಕು

**ಸಂಭವನೀಯ ಪ್ರಶ್ನೆಗಳು**

೧. ಸೃಜನಶೀಲ ಸಾಹಿತ್ಯಕ್ಕೆ ಪಾಶ್ಚಾತ್ಯ ವೈಚಾರಿಕತೆಯ ಮಾನದಂಡಗಳ ನಡುವಿನ ಬೆಸುಗೆಯನ್ನು ಲೇಖಕರು ಹೇಗೆ ವ್ಯಕ್ತಪಡಿಸಿದ್ದಾರೆ?

೨. ವೈಚಾರಿಕ ಚಿಂತನೆ ಹಾಗೂ ತಾಂತ್ರಿಕ ಜ್ಞಾನ ಸೃಜನಶೀಲ ಸಾಹಿತ್ಯದ ಮೇಲೆ ಬೀರಿರುವ ಪರಿಣಾಮ ಎಂಥದು?

೩. ಗ್ರಾಹಕ ಸಂಸ್ಕೃತಿಗೂ ಸಾಹಿತ್ಯಕ್ಕೂ ಇರುವ ಸಂಬಂಧವನ್ನು ಲೇಖಕರು ವ್ಯಕ್ತಪಡಿಸುವ ಬಗೆ ಎಂತಹದು?

೪. ಸ್ತ್ರೀವಾದ ಲೇಖನದಲ್ಲಿ ಹೇಗೆ ಪ್ರಕಟಗೊಂಡಿದೆ ಉದಾಹರಣೆಯೊಂದಿಗೆ ವಿವರಿಸಿ

೫. ಸೃಜನಶೀಲ ಪ್ರತಿಭೆ ಅರಳಲು ಅವಕಾಶಗಳು ಹೆಚ್ಚು ಎಂದು ಲೇಖಕರು ಹೇಳಲು ಕಾರಣವೇನು? ವಿವರಿಸಿ